ಕುವೆಂಪುರವರ ಈ ಕವನ ಸ್ವಾಮಿ ವಿವೇಕಾನಂದರ ಮೇಲಿನ ಭಾವಕ್ಕೆ ಭಾಷೆಯಾಗಿರುವಂತೆ ತೋರುತ್ತದೆ:

**ಹಳೆಮತದ ಕೊಳೆಯೆಲ್ಲ, ಹೊಸಮತಿಯ ಹೊಳೆಯೆಲ್ಲ**
**ಕೊಚ್ಚಿಹೋಗಲಿ ; ಬರಲಿ ವಿಜ್ಞಾನ ಬುದ್ಧಿ**

"ಎಲ್ಲ ಮತಗಳ ಹೊಟ್ಟನ್ನು ತೂರಿ, ಎಲ್ಲ ತತ್ತ್ವಗಳನ್ನೂ ಮೀರಿ, ನಿರ್ದಿಗಂತದ ಕಡೆಗೆ ವಾಲಿ, ಎಲ್ಲಿಯೂ ನಿಲ್ಲದೆ ಅನಂತವಾಗು" ಎಂದು ಅವರು 'ವಿಶ್ವಮಾನವ ಗೀತೆ' ಯಲ್ಲಿ ಕರೆಕೊಡುತ್ತಾರೆ.

"ಆರ್ಯಮಾತೆಯ ಅಮೃತಪುತ್ರರಿರಾ, ಶೂದ್ರರು, ಅಂತ್ಯಜರು, ದರಿದ್ರರು, ಅಜ್ಞಾನಿಗಳು, ಚಂಡಾಲ, ಚಮ್ಮಾರರೆಲ್ಲರೂ, ನಿಮ್ಮ ರಕ್ತಬಂಧುಗಳಾದ ಸೋದರರು ! ಜಾತಿ ಮತಗಳನ್ನು ಮೀರಿ ನರರೂಪಿ ನಾರಾಯಣರ ಸೇವೆ ಮಾಡಿ" – ಹೀಗೆ ಹರಿಯುವ ವಿವೇಕಾನಂದರ ನಿತ್ಯನೂತನ ವಿಚಾರಧಾರೆ ಕುವೆಂಪುರವರ ಸಾಹಿತ್ಯದಲ್ಲಿ ಮಳೆಕಾಲದ ತುಂಗೆಯ ಪ್ರವಾಹದಂತೆ ಉಕ್ಕಿ ಹರಿಡಿದೆ.

ಇದಕ್ಕೆ ಅವರ ನಾಟಕಗಳೂ ಹೊರತಾಗಿಲ್ಲ. ಜಲಗಾರ ನಾಟಕದಲ್ಲಿ 'ಜಲಗಾರ'ನ ಕಸಗುಡಿಸುವ ಕೆಲಸ ಅನೇಕ ಅರ್ಥಗಳನ್ನು ಕೊಡುತ್ತದೆ. ದೇವರು, ಪೂಜೆ, ಸೇವೆಗಳ ಬಗ್ಗೆ ಹಾಗೂ ವರ್ಣ ವ್ಯವಸ್ಥೆಯ ವಿರುದ್ಧ ಹೊಸ ವ್ಯಾಖ್ಯಾನಗಳು ಇಲ್ಲಿವೆ. "ಜಗದ ತೋಟಿಯು ನಾನು" ಎನ್ನುವ ಶಿವ ಇಲ್ಲಿ ಜಲಗಾರನಾಗಿದ್ದಾನೆ. ಈ ಜಲಗಾರ ಹೇಳುವ ಕೆಳಗಿನ ಮಾತುಗಳು ಮನನೀಯ:

**ಕರ್ಮವಾರಾಧನೆ, ಸೇವೆಯೇ ಪೂಜೆ**
**ಜಗದ ದೇಗುಲದಲ್ಲಿ ಜಗದುದಯ ಕಾರಣನ**
**ಕಾಣದವನೆಂತು ಕಾಣ್ಬನು ಶಿವನ ಗುಡಿಯಲ್ಲಿ?**

ಇಲ್ಲಿ ಸಾಮಾಜಿಕವಾಗಿ ಅಸ್ಪೃಶ್ಯನಾಗಿರುವ ಕಸಗುಡಿಸುವ 'ಜಲಗಾರ'ನೇ ಶಿವನಾಗಿಬಿಟ್ಟಿದ್ದಾನೆ. 'ಶೂದ್ರತಪಸ್ವಿ' ನಾಟಕದಲ್ಲಿ ಅವನೇ 'ಶೂದ್ರತಪಸ್ವಿ'ಯಾಗಿದ್ದಾನೆ. ಸಾಧನೆ, ಆತ್ಮವಿಶ್ವಾಸದಿಂದ ಅಸಾಧ್ಯವಾದುದನ್ನೂ ಸಾಧಿಸಬಹುದೆಂಬುದು 'ಯಮನ ಸೋಲು' ನಾಟಕದಲ್ಲಿ ವ್ಯಕ್ತವಾಗಿದೆ.

'ಶ್ಮಶಾನ ಕುರುಕ್ಷೇತ್ರಂ' ನಾಟಕದ ಕೊನೆಯ ದೃಶ್ಯದಲ್ಲಿ ಕೃಷ್ಣ ರುದ್ರನಿಗೆ 'ಕಲಿಯುಗ ಮಹಾಲಲಿತಕಾವ್ಯಂ' ಅನ್ನು ನಿರೂಪಿಸುವಾಗ, "ಶ್ರೀರಾಮಕೃಷ್ಣ ಪರಮಹಂಸನ ವಿವೇಕಾನಂದನ" ಎಂದು ಉದ್ಗರಿಸುತ್ತಿದ್ದಂತೆ ಕೃಷ್ಣನೂ ರುದ್ರನೂ ತಲೆಬಾಗಿ ನಮಸ್ಕರಿಸುತ್ತಾರೆ. ಇಲ್ಲಿ ದಿವ್ಯತ್ರಯರಲ್ಲಿ ಕುವೆಂಪು ಅವರು ಇಟ್ಟಿದ್ದ ಗೌರವದ ಪರಾಕಾಷ್ಠತೆಯನ್ನು ಕಾಣಬಹುದು.

ಸ್ವಾಮಿ ವಿವೇಕಾನಂದರ ವಿಶಾಲದೃಷ್ಟಿ, ಸರ್ವಧರ್ಮ ಸಮನ್ವಯ ತತ್ತ್ವ, ಪರಿಶುಭ್ರ ಶೀಲ, ಅವರ 'ಮಧುರ ಮಹೋನ್ನತ ಭಾವನೆ' – ಇವುಗಳನ್ನು ಕುವೆಂಪುರವರ ಸಮಸ್ತ ಸಾಹಿತ್ಯದಲ್ಲಿ ಕಂಡಂತೆ, 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿಯೂ ಕಾಣಬಹುದು.

ಈ ವಿಷಯವಾಗಿ ಕುವೆಂಪು ಹೀಗೆ ಹೇಳುತ್ತಾರೆ: "ಅಲ್ಲಿ ('ಶ್ರೀರಾಮಾಯಣಂ ದರ್ಶನಂ' ನಲ್ಲಿ) ಶ್ರೀರಾಮಕೃಷ್ಣ ವಿವೇಕಾನಂದರ ಸಮನ್ವಯದರ್ಶನವನ್ನು ಸಂದರ್ಶಿಸಬಹುದು. **ಸಮನ್ವಯ, ಸರ್ವೋದಯ** ಮತ್ತು **ಪೂರ್ಣದೃಷ್ಟಿ** – ಇವುಗಳೇ 'ಶ್ರೀರಾಮಾಯಣ ದರ್ಶನ'ದ ತ್ರಿನೇತ್ರಗಳಾಗಿವೆ."

ವೀರ ವೇದಾಂತಿ ಸ್ವಾಮಿ ವಿವೇಕಾನಂದರು ಭಾರತದ ಉದ್ದಗಲಕ್ಕೂ ಸಂಚರಿಸುತ್ತಾ, ಭಾರತೀಯರಿಗಿಂದು ಬೇಕಾಗಿರುವುದು 'ಶಕ್ತಿ' ಎಂದರು. 'ಏಳಿ, ಜಾಗೃತರಾಗಿ. ಗುರಿಸೇರುವವರೆಗೂ ನಿಲ್ಲದಿರಿ' ಎಂದು ಗರ್ಜಿಸುತ್ತಾ ಶಕ್ತಿಸಾಗರವನ್ನೇ ಹರಿಸಿದರು. ಸ್ವಾಮೀಜಿಯವರ ಜೀವನಸಂದೇಶ ಕುವೆಂಪುರವರಿಗೆ 'ಉಜ್ವಲ ಪ್ರೋತ್ಸಾಹವನ್ನೇ ಕೊಟ್ಟಿತು.' ಕುವೆಂಪು ಹೀಗೆ ಬರೆಯುತ್ತಾರೆ: "ಸ್ವಾಮೀಜಿಯ ಅದ್ಭುತ ಸಾಹಸಗಳೆಲ್ಲ ನನ್ನ ಮನಸ್ಸನ್ನು ತುಂಬಿ ಕೊಂಡಿದ್ದರಿಂದ ಅವರು ದಯಪಾಲಿಸಿದ ಎಲ್ಲವನ್ನೂ ಧಾರೆ ಧಾರೆಯಾಗಿ ಸುರಿದುಬಿಟ್ಟೆ."

ಯಾರು ಮಹತ್ ಸಾಧನೆಗಳನ್ನು ಸಾಧಿಸಿರುವರೋ, ಅವರೆಲ್ಲರ ಮೂಲಪ್ರೇರಣೆ ಸ್ವಾಮಿ ವಿವೇಕಾನಂದರು ಎಂದು ಹೇಳುತ್ತಾರೆ ಕುವೆಂಪು. ಯುಗಪರಿವರ್ತನಕಾರಿಯಾದ ಗುರುದೇವನ ವ್ಯಕ್ತಿತ್ವದಿಂದ ಪ್ರಭಾವಿತರಾದ ಕುವೆಂಪು, ವಿವೇಕಾನಂದರಿಗೆ ಸಂಪೂರ್ಣ ಶರಣಾಗಿದ್ದಾರೆ. ಈ ವಿಷಯದಲ್ಲಿ ಅವರು ಹೀಗೆ ಬರೆಯುತ್ತಾರೆ:

"ನನ್ನ ತಾರುಣ್ಯ ಸ್ವಾಮಿ ವಿವೇಕಾನಂದರಿಗೆ ಎಷ್ಟು ಋಣಿಯಾಗಿತ್ತೆಂದು ನಾನು ಹೇಳಿ ಪೂರೈಸಲಾರೆ. ಅದನ್ನು ನೆನೆದರೇ ಕೃತಜ್ಞತೆಯ ಹರ್ಷಾಶ್ರು ಹನಿಯುತ್ತದೆ. ಸಂಕುಚಿತ ಮತಭಾವಗಳನ್ನು ಕತ್ತರಿಸಿ ಕೆಡಹಿ, ಮನಸ್ಸಿನಲ್ಲಿ ಉದಾತ್ತ ಸಮನ್ವಯ ದೃಷ್ಟಿಯನ್ನು ಪ್ರಜ್ವಲಿಸುವ ಶಕ್ತಿ ಈ ಉಪನ್ಯಾಸಗಳಲ್ಲಿ ಇರುವಂತೆ ಬೇರೆಲ್ಲಿಯೂ ಇಲ್ಲ. ಪತನ ಸಮಯದಲ್ಲಿ ನಮ್ಮನ್ನು ಕೈಹಿಡಿದೆತ್ತುವ ಔದಾರ್ಯ, ಹೃದಯ ದೌರ್ಬಲ್ಯದ ಸಮಯದಲ್ಲಿ ಕ್ಲೈಬ್ಯವನ್ನು ಕಿತ್ತೊಗೆದು ಕೆಚ್ಚನ್ನು ನೆಡುವ ಸಿಡಿಲಾಳೆ ಈ ಭಾಷಣಗಳಲ್ಲಿ ಅನುಭವಪ್ರತ್ಯಕ್ಷವಾಗುವಂತೆ ಬೇರೆಲ್ಲಿಯೂ ಆಗುವುದಿಲ್ಲ. ನಮ್ಮ ವ್ಯಕ್ತಿತ್ವಸಮಸ್ತವನ್ನೂ, ಸರ್ವಾವಯವಸಂಪೂರ್ಣವಾಗಿ ವಿಕಾಸಗೊಳಿಸಿ, ಪೂರ್ಣತೆಯ ಕಡೆಗೆ ನಮ್ಮನ್ನು ಕೊಂಡೊಯ್ಯುವ ಪೂರ್ಣದೃಷ್ಟಿಯೂ ಇಲ್ಲಿ ಸಿದ್ಧಿಸುತ್ತದೆ. **ಇದು ಅಮೃತದ ಮಡು; ಮಿಂದು ಧನ್ಯರಾಗಿ ! ಇದು ಜ್ಯೋತಿಯ ಖನಿ; ಹೊಕ್ಕು ಪ್ರಬುದ್ಧರಾಗಿ !**" (*ನಾಡಿಗೆ ಕರೆ*)

ಹೀಗೆ ನಾಡಿಗೆ ಕರೆ ಕೊಡುವ ಕುವೆಂಪು, **ಮನುಜಮತ, ವಿಶ್ವಪಥ, ವಿಜ್ಞಾನ ದೃಷ್ಟಿ, ವಿಚಾರಬುದ್ಧಿ** – ಇವು ನಮ್ಮ ಜನ ಹೃದಯದ ನಿತ್ಯ ಮಂತ್ರಗಳಾಗಲಿ ಎಂದು ಹಾರೈಸುತ್ತಾರೆ.

ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರನ್ನು ಧ್ಯಾನಿಸಿ ಆರಾಧಿಸಿ ಕುವೆಂಪು ಮಹಾಕವಿಯಾದರು, ರಸಋಷಿಯಾದರು. ವಿವೇಕಾನಂದರ ಉಜ್ವಲ ವ್ಯಕ್ತಿತ್ವದಿಂದ ಪ್ರಭಾವಿತರಾದ ಪುಟ್ಟಪ್ಪನವರನ್ನು ಸ್ವಾಮೀಜಿ ಶ್ರೀರಾಮಕೃಷ್ಣರ ಪದತಲದಲ್ಲಿ ಸಮರ್ಪಿಸಿದರು, ವಿಶ್ವಕವಿಯಾದ 'ಕುವೆಂಪು'ವಾಗಿ ರೂಪಿಸಿದರು.

**"ಹಿಂದೂಧರ್ಮದ ವೈಶಾಲ್ಯದ ಮತ್ತು ವೇದಾಂತ ತತ್ತ್ವದ ಗಭೀರತೆಯ ಪರಿಚಯವು ಸರ್ವಸಾಮಾನ್ಯವೂ ಸರ್ವಸುಲಭ ಗ್ರಾಹ್ಯವೂ ಆಗಬೇಕಾದರೆ, ಸ್ವಾಮೀಜಿಯ ಉಪನ್ಯಾಸಗಳನ್ನು ಬಿಟ್ಟರೆ ಬೇರಾವುದೂ ಇಲ್ಲ. ಸಂಕುಚಿತ ಮತಭಾವಗಳನ್ನು ಕತ್ತರಿಸಿ ಕೆಡಹಿ, ಮನಸ್ಸಿನಲ್ಲಿ ಉದಾತ್ತ ಸಮನ್ವಯ ದೃಷ್ಟಿಯನ್ನು ಪ್ರಜ್ವಲಿಸುವ ಶಕ್ತಿ ಈ ಉಪನ್ಯಾಸಗಳಲ್ಲಿರುವಂತೆ ಬೇರೆಲ್ಲಿಯೂ ಇಲ್ಲ... ಸ್ವಾಮಿ ವಿವೇಕಾನಂದರ ತಪಃಪೂರ್ಣವಾದ ಶಕ್ತಿವಾಣಿಯಲ್ಲಿ ಆತ್ಮೋದ್ಧಾರಕವಾದ ವಿಭೂತಿ ಸ್ವಯಂಶೀಲವಾಗಿದೆ."**

**– ಕುವೆಂಪು**